Names and Length of the Roads in Shahabad Revenue Circle

26 SRI SHARANAPPA BHAIRI (Shahabad) SRI B. V. KAKKILAYA (Vittal)

Will the Chief Minister be pleased to state.—

(a) the names and length of the roads (both P.W.D.) and State Fund roads *i. e.* R.C, in Shahabad Assembly constituency coveriug Nalwar, Shahabad, Revenue Circle of Chittapur taluk, Farathabad revenue circles of Gulbarga Taluk;

(b) the amount required for the above mentioned roads for making them all weather roads (estimate for each such road be furnished) ?

Sri R. GUNDU RAO (Chief Minister).—

(a) The details are given in the Statement I laid on the Table. *

(b) The details are furnished in the Statement II laid on the Table*

ಶ್ರೀ ಶರಣಪ್ಪ ಭೈರಿ.—ಸ್ವಾಮಿ ನನ್ನ ಪ್ರಶ್ನೆಗೆ ರಸ್ತೆಗಳು, ಬ್ರಿಡ್ಜಸ್ ಇವುಗಳೆಲ್ಲದರ ಬಗ್ಗೆ ವಿವರಣೆಗಳನ್ನು ಕೊಟ್ಟು ಬ್ರಿಡ್ಜಸ್ ಎಸ್ಟಿಮೇಟುಗಳನ್ನು ಕೂಡ ಕೊಟ್ಟಿರುತ್ತೀರಿ, ಆದರೆ ಇವೆಲ್ಲಾ ಎಸ್ಟಿಮೇಟುಗಳಿಗೆ ಹಣ ಸಾಂಕ್ಷನ್ ಕೊಟ್ಟಿರುತ್ತೀರಾ ಎಂದು ಕೇಳುತ್ತೇನೆ

ಶ್ರೀ ವೀರಪ್ಪ ಮೊಯಿಲಿ.—ಎಸ್ಟಿಮೇಟುಗಳು ತಯಾರಾಗುತ್ತ ದೆಯೇ ಹೊರತು ಸಾಂಕ್ಷನ್ ಮಾಡಿಲ್ಲ.

ಶ್ರೀ ಶರಣಪ್ಪ ಭೈರಿ.—ಎಸ್ಟಿಮೇಟ್ ಎಲ್ಲ ಆಗಿರುವುದರಿಂದ ಈ ವರ್ಷದ ಬಜೆಟ್‌ನಲ್ಲಿ ಇವುಗಳಿಗೆ ಹಣವನ್ನು ಒದಗಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಇವುಗಳನ್ನು ಬಜೆಟ್‌ನಲ್ಲಿ ಸೇರಿಸುವ ವಿಚಾರದ ಬಗ್ಗೆ ಸರ್ಕಾರ ಪುನರ್‌ಪರಿಶೀಲನೆ ಮಾಡುತಿ ದೆ.

ಶ್ರೀ ಶರಣಪ್ಪ ಭೈರಿ. ಕೆಲವು ಕೆಲಸದಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು, ಇಂಜಿನೀಯರ್‌ಗಳನ್ನು ಕೇಳಿದರೆ, ಹಣ ಇದಕ್ಕೆ ಮಂಜೂರಾಗಿಲ್ಲವೆಂದು ಉತ್ತರ ಕೊಡುತ್ತಾರೆ, ಆದ್ದರಿಂದ ರೋಡ್ ಮತ್ತು ಬ್ರಿಡ್ಜ್‌ಸ್‌ಗಳಿಗೆ ಹಣವನ್ನು ಈ ವರ್ಷದ ಬಜೆಟ್‌ನಲ್ಲಿ ಒದಗಿಸುತ್ತೀರಾ ಎಂದು ಕೇಳುತ್ತೇನೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಇದು ಒಂದು ಮೂಲ ಪ್ರಶ್ನೆಯಾಗಿರುತ್ತದೆ ಅದೇನೆಂದರೆ ಯಾವ ರಸ್ತೆಯನ್ನು ಮೊದಲು ಸೇರಿಸಬೇಕು, ಎನ್ನುವ ಬಗ್ಗೆ ಪ್ರಾಶಸ್ತ್ಯವನ್ನು ಕೊಟ್ಟು ಅದರಂತೆ ನಿಮ್ಮ ಕ್ಷೇತ್ರಕ್ಕೂ ಗಮನ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೇವೆ.

Disconnection of I. P. sets in Aland Taluk.

265 SRI ANNA RAO B. Patil, (Alland)—Will the Chief Minister be pleased to state. —

(a) whether it is not a fact that disconnection of the installation of IP sets are going on in Aland Taluk due to which crops of the poor farmers are destroyed ;

---

* Copy placed in the Karnataka Legislative Library vide No 5 dated 5-3-80

(b) whether it has come to the notice of Government that maximum penalty in thousands is being lived towards non-payment of electricity charges as also criminal cases are being registered in the Judicial Court in this regard;

(c) if so, what measures the Government intend to take to stop harassment by the authorities of Karnataka Electricity Board in Aland Taluk ?

SRI VEERAPPA MOILY (Minister for Finance) [on be half of

SRI R. GUNDU RAO (Chief Minister)]--

(a) Disconnection of only 416 IP sets installations out of 2240 is effected for non-payment of power charges as per Rules.

(b) No.

(c) Does not arise.

ಶ್ರೀ ಎ. ಬಿ. ಪಾಟೀಲ್.—ಸ್ವಾಮಿ ಆಲಂದ್ ತಾಲ್ಲೂಕಿನಲ್ಲಿ ೨೨೪೦ ನೀರಾವರಿ ಪಂಪ್‌ಸೆಟ್ಟುಗಳ ಪೈಕಿ ೪೧೬ ಪಂಪ್‌ಸೆಟ್‌ಗಳಿಗೆ ಕರೆಂಟ್ ಡಿಸ್‌ಕನೆಕ್ಟ್ ಮಾಡಿದ್ದೀವೆಂದು ಹೇಳಿದ್ದೀರಿ. ಹಾಗೆ ನನ್ನ ಪ್ರಶ್ನೆ (ಅ)ಗೆ ಇಲ್ಲವೆಂದು ಉತ್ತರವನ್ನು ಕೊಟ್ಟಿರುತ್ತೀರಿ. ಆದರೆ ಈ ರೀತಿ ಡಿಸ್ ಕನೆಕ್ಟ್ ಮಾಡಿರುವುದರಿಂದ ರೈತರಿಗೆ ಆಗತಕ್ಕಂಥ ಅನ್ಯಾಯವನ್ನು ಸರ್ಕಾರದವರು ಗಮನಿಸುವುದರ ಜೊತೆಗೆ ಮೂರು ನಾಲ್ಕು ವರ್ಷಗಳಿಂದ ಉತ್ಪನ್ನಕ್ಕೂ ಕೂಡ ಧಕ್ಕೆಯಾಗಿರುತ್ತದೆ. ಅಲ್ಲದೆ ತಮಗೆ ಯಾವ ರೀತಿಯಾದ ಇನ್‌ಫರ್‌ಮೇಷನ್ ಕೊಡದೆ ನೂರಾರು ಕೇಸ್‌ಗಳನ್ನು ಕೋರ್ಟಿಗೆ ಎಳೆದಿರುತ್ತಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ —ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆಂದು ಹೇಳಿದ್ದಾರೆ. ಆ ಡಾಕ್ಯುಮೆಂಟ್ಸ್‌ಗಳನ್ನು ಅವರು ನಮ್ಮಕಡೆಗೆ ಕಳುಹಿಸಿಕೊಡಲಿ.

ಶ್ರೀ ಎ. ಬಿ. ಪಾಟೀಲ್.—ಈ ಬಗ್ಗೆ ೧೯೭೯ರಲ್ಲಿ ರಾಜ್ಯಪಾಲರಿಗೆ ಪತ್ರವನ್ನು ಬರೆಯಲಾಗಿದೆ, ೧೯೭೮ ರಲ್ಲಿ ಮಂತ್ರಿಗಳಿಗೆ ಪತ್ರ ಬರೆಯಲಾಗಿದೆ. ಈಗ ವಿದ್ಯುಚ್ಛಕ್ತಿಯನ್ನು ನಿಲ್ಲಿಸಿರುವುದರಿಂದ ಈ ೪೧೬ ಮಂದಿಗೂ ಬಹಳ ತೊಂದರೆಯಾಗಿವೆ ನೀವು ಇದ್ದೂ ಸಹ ಅವರು ಅದನ್ನು ಉಪಯೋಗಿಸದಂತಾಗಿದೆ. ಈ ಬಗ್ಗೆ ರೈತರು ನ್ಯಾಯಾಲಯಕ್ಕೂ ಸಹ ಓಡಾಡುವ ಪರಿಸ್ಥಿತಿ ಬಂದಿದೆ, ಈ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ನಾವು ಅ' ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರ ಸರಿಯಿಲ್ಲವೆಂದು ಹೇಳಿದ್ದಾರೆ. ಈ ಬಗ್ಗೆ ಅವರಲ್ಲಿ ಏನೇನು ಡಾಕ್ಯುಮೆಂಟ್ಸ್ ಇವೆ ಅವನ್ನು ನಮ್ಮ ಕಡೆ ಕಳುಹಿಸಲಿ. ನಾವು ಆ ಬಗ್ಗೆ ಕ್ರಮ ತೆಗೆದುಕೊಳ್ಳಲು ತಯಾರಿದ್ದೇವೆ. ಇನ್ನು ಎರಡನೆಯದಾಗಿ, ರೈತರ ಬವಣೆಯ ವಿಚಾರದಲ್ಲಿ ಸಂಪೂರ್ಣ ಅರಿವು ಸರ್ಕಾರಕ್ಕೆ ಇದೆ. ಇಲ್ಲಿ ಪಂಪುಸೆಟ್ಟುಗಳಿಗೆ ಕರೆಂಟ್ ಡಿಸ್‌ಕನೆಕ್ಟ್ ಮಾಡಿರುವ ವಿಚಾರ ಬಂದಿದೆ. ಪ್ರಮುಖವಾಗಿ ವಿದ್ಯುಚ್ಛಕ್ತಿ ಶುಲ್ಕವನ್ನು ಪಾವತಿ ಮಾಡಲು ಸರ್ಕಾರ ೧೫ ದಿವಸಗಳ ಅವಕಾಶವನ್ನು ಕಾನೂನು ಪ್ರಕಾರವಾಗಿ ಕೊಡಬೇಕಾಗುತ್ತದೆ. ನಂತರ ಇನ್ನೂ ಒಂದು ೧೫ ದಿವಸ ಕಾಲಾವಕಾಶ ಕೊಡಬಹುದು. ನಂತರ ಶುಲ್ಕ ಕಟ್ಟಲು ೨ ತಿಂಗಳು ತಡವಾದರೆ ಅವರು ಬರವಣಿಗೆ ಮುಖಾಂತರ ಬರೆದುಕೊಟ್ಟ ಪಕ್ಷದಲ್ಲಿ ಡಿಸ್‌ಕನೆಕ್ಟ್ ತಡೆಯಬಹುದು. ಆದರೆ ೩ ತಿಂಗಳ ಒಳಗೆ ಹಣ ಪಾವತಿ ಮಾಡದಿದ್ದರೆ ಕರೆಂಟ್‌ನ್ನು ಡಿಸ್‌ಕನೆಕ್ಟ್ ಮಾಡಬೇಕೆಂದು ಸರ್ಕಾರದ ನೀತಿ ಇದೆ. ಆ ನೀತಿಯನ್ನು ಉಲ್ಲಂಘನೆ ಮಾಡಿಕೊಂಡು ಏನಾದರೂ ಅಲ್ಲಿನ ಅಧಿಕಾರಿಗಳು ಡಿಸ್‌ಕನೆಕ್ಟ್ ಮಾಡಿರುವುದು ಗಮನಕ್ಕೆ ಬಂದರೆ ಅವರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಮಳ್ಳೂರು ಆನಂದ ರಾವ್.—ಸ್ವಾಮಿ, ಮಾನ್ಯ ಸದಸ್ಯರು ಕೆಲವರು ವಿದ್ಯುಚ್ಛಕ್ತಿ ದುರುಪಯೋಗ ಮಾಡಿದ್ದಾರೆಂದು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದಾರೆಂದು ಹೇಳಿದರು. ಅವರು

'ಆ' ಪ್ರಶ್ನೆಯಲ್ಲಿ ಆ ಬಗ್ಗೆ ಕೇಳಿದ್ದಾರೆ. ಹಾಗಿದ್ದಲ್ಲಿ ಎಷ್ಟು ಜನರ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದೀರಾ? ಯಾವ ಆಧಾರದ ಮೇಲೆ ಹಾಕಿದ್ದೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ವಿದ್ಯುಚ್ಛಕ್ತಿ ಹಣವನ್ನು ಪಾವತಿ ಮಾಡದೇ ಇದ್ದವರಿಗೆ ಜುಲ್ಮಾನೆ ಇದೆ. ಮತ್ತೆ ಅದನ್ನು ವಸೂಲು ಮಾಡುವುದಕ್ಕೆ ಕೂಡ ನಾವು ಕಾರ್ಯಕ್ರಮ ಕೈಕೊಳ್ಳುತ್ತೇವೆ. ಆದಕಾರಣ ಮಾನ್ಯ ಸದಸ್ಯರಿಗೆ ಈ ಬಗ್ಗೆ ಏನು ವಿವರಗಳು ಬೇಕೆಂಬುದು ನನಗೆ ಅರ್ಥ ಆಗಲಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ನೀವು ಏನು ಮೂರು ತಿಂಗಳು ಆದಮೇಲೆ ಬರವಣಿಗೆಯಲ್ಲಿ ಕೊಟ್ಟ ಪಕ್ಷದಲ್ಲಿ, ಅವರಿಗೆ ಒದಗಿಸತಕ್ಕ ವಿದ್ಯುಚ್ಛಕ್ತಿಯನ್ನು ಅವರು ಬಿಲ್ ಪಾವತಿ ಮಾಡದಿದ್ದರೂ, ನಿಲ್ಲಿಸದೇ ಮುಂದುವರಿಸುತ್ತೇವೆಂದು ಹೇಳಿದಿರಿ, ಆ ಬಗ್ಗೆ ಈಗಾಗಲೇ ಕೆಲವು ಪಂಪು ಸೆಟ್ಟುಗಳ ವಿದ್ಯುತ್‌ನ್ನು ಕಡಿದು ಹಾಕಿದ್ದಾರೆ, ಆ ಬಗ್ಗೆ ಮತ್ತೆ ವಿದ್ಯುತ್ ನೀಡಲು ಕೂಡಲೇ ಆದೇಶವನ್ನು ಕೊಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಆ ಬಗ್ಗೆ ನಿಯಮ ಮಾಡಲಾಗಿದೆ. ಈ ಬಗ್ಗೆ ಮೂರು ತಿಂಗಳಾದ ಮೇಲೂ ವಿದ್ಯುತ್ ಬಿಲ್ ಕಟ್ಟದೇ ರೈಟಿಂಗ್‌ನಲ್ಲಿ ಬರೆದುಕೊಟ್ಟವರಿಗೆಲ್ಲಾ ವಿದ್ಯುತ್ ಒದಗಿಸುತ್ತಾ ಹೋದರೆ, ಆಮೇಲೆ ಯಾರೂ ಬಿಲ್ ಕಟ್ಟುವುದಕ್ಕೆ ಹೋಗುವುದಿಲ್ಲ. ಆಗ ಈ ಬೋರ್ಡ್‌ನ್ನು ಮುಚ್ಚಬೇಕಾಗುತ್ತದೆ. ಆದುದರಿಂದ ಈ ಬಗ್ಗೆ ನಿಯಮದ ಒಂದು ಕಕ್ಷೆಯಲ್ಲಿ ರೈತರಿಗೆ ಎಷ್ಟು ಸಹಾಯ ಮಾಡಬಹುದೋ ಅಷ್ಟೂ ಮಾಡಬಹುದು. ನಮ್ಮ ಉದ್ದೇಶ ರೈತರಿಗೆ ಸಹಾಯ ಮಾಡಬೇಕು ಮತ್ತು ಸಂಸ್ಥೆಯೂ ಬೆಳೆಯಬೇಕು ಎಂಬುದು. ಆ ದೃಷ್ಟಿಯಿಂದ ನಿಯಮಾವಳಿಗಳನ್ನು ಮಾಡಿದ್ದೇವೆ, ಈ ಬಗ್ಗೆ ನಾವು ಖಂಡಿತವಾಗಿ ವಿಚಾರ ಮಾಡಬೇಕಾಗುತ್ತದೆ. We can come out with certain suggestions, we can always go into them and if necessary we can amend it.

ಶ್ರೀ ಮಳ್ಳೂರು ಆನಂದ ರಾವ್.—ಈಗ ೪೧೬ ಜನಕ್ಕೆ ಏನು ವಿದ್ಯುತ್ ನಿಲ್ಲಿಸಲಾಗಿದೆ, ಅವರಿಗೆ ಮತ್ತೆ ವಿದ್ಯುತ್ ಕನೆಕ್ಷನ್ ಕೊಡುತ್ತೀರಾ ಮತ್ತು ಆ ಬಗ್ಗೆ ಕೇಸ್ ಏನನ್ನು ಹಾಕಲಾಗಿದೆಯೋ ಅದನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಪರಿಶೀಲನೆ ಮಾಡೋಣ.

ಶ್ರೀ ಆರ್. ರಾಜೂಗೌಡ.—ಸ್ಟ್ಯಾಂಡಿಂಗ್ ಕ್ರಾಪ್ ಇರುವಾಗ, ಬಿಲ್ ಎಷ್ಟುಬಾಕಿ ಇದ್ದರೂ ಸಹ, ಅದನ್ನು ವಸೂಲು ಮಾಡುವುದಕ್ಕಾಗಿ ಕರೆಂಟ್ ಡಿಸ್‌ಕನೆಕ್ಷನ್ ಮಾಡಬಾರದು ಎನ್ನುವ ವಿಷಯ ಸರ್ಕಾರದ ಗಮನದಲ್ಲಿ ಇದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಇರತಕ್ಕ ಕಾನೂನು ಪ್ರಕಾರ ಯಾವ ರೈತರು ಸಂಸ್ಥೆಗೆ ಬರವಣಿಗೆಯಲ್ಲಿ ಅರ್ಜಿಯನ್ನು ಈ ಬಗ್ಗೆ ಬರೆದುಕೊಳ್ಳುತ್ತಾರೋ ಅವರಿಗೆ ೩ ತಿಂಗಳ ವಾಯಿದೆ ಕೊಡಬೇಕೆಂದು ನಿಯಮ ಇದೆ. ಅದರಂತೆ ಅವರು ಆ ಬಗ್ಗೆ ಅರ್ಜಿಯನ್ನು ಹಾಕಿದರೆ ಕಾಲವಿಂತಿ ವಿಸ್ತರಣೆ ಮಾಡಬಹುದು.

ಶ್ರೀ ಎ. ಬಿ. ಪಾಟೀಲ್.—ಈಗ ನಾನು ಕೇಳಿಕೊಳ್ಳುವುದೇನೆಂದರೆ, ಈಗ ಮೂರಿಗೆ ವಿದ್ಯುತ್‌ನ್ನು ನಿಲ್ಲಿಸಲಾಗಿದೆ, ಅವರಿಗೆ ಮತ್ತೆ ವಿದ್ಯುತ್‌ನ್ನು ಒದಗಿಸಬೇಕು, ಮತ್ತು ಈ ಬಗ್ಗೆ ಏನು ಕೋರ್ಟಿನಲ್ಲಿ ಕೇಸ್‌ಗಳು ಇವೆ ಅವುಗಳನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು. ಇನ್ನು ಈಗ ಏನು ಪೆನಾಲ್ಟಿಯನ್ನು ಹಾಕಲಾಗುತ್ತಿದೆ ಇದು ಬಹಳ ಜಾಸ್ತಿ ಇದೆ. ಮೂರು ನೂರು ರೂಪಾಯಿಗಳಿಗೆ ಬದಲು ಮೂರು ಸಾವಿರ ರೂಪಾಯಿ ಪೆನಾಲ್ಟಿ ಹಾಕಿದ್ದಾರೆ. ಅದರ ಬಗ್ಗೆ ಸರ್ಕಾರ ಗಮನ ಕೊಡಬೇಕು, ಇದು ಬಹಳ ಜಾಸ್ತಿ. ಇದು ಸರಿಯಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ. – ಮಾನ್ಯ ಸದಸ್ಯರು ಹೇಳಿದ ಪ್ರಕಾರ ಪರಿಸ್ಥಿತಿ ಬಹಳ ಗಂಭೀರ ಇದೆ. ಇಲ್ಲಿ ಸುಮಾರು ೪೧೬ ಜನರಿಗೆ ಬಹಳ ತೊಂದರೆ ಆಗಿದೆ ಎಂದು ಹೇಳಿದ್ದಾರೆ. ಇನ್ನು ಪೆನಾಲ್ಟಿ ಬಗ್ಗೆ ಹೇಳಿದ್ದಾರೆ. ಸಾಮಾನ್ಯವಾಗಿ ಯಾರು ಹಣವನ್ನು ಇಲಾಖೆಗೆ ಕಟ್ಟುವುದಿಲ್ಲವೋ ಅವರಿಂದ ಇದನು ವಸೂಲು ಮಾಡಲಾಗುತ್ತದೆ. ಅವರು ಆ ಬಗ್ಗೆ ಏನಂ ವಾದ ಮಾಡಿದ್ದಾರೆ ಅದನ್ನು ಪರಿಶೀಲನೆ ಮಾಡೋಣ. ರೈತರಿಗೆ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಿದ್ದರೆ, ಪರಿಹಾರವನ್ನು ಆದಷ್ಟು ಜಾಗ್ರತೆ ಕೋಡೋಣ.